Reg. No.

**BASKAL 103/BSWKAL 103**

**ಗುಣಾಂಕ ಆಧಾರಿತ ಮೊದಲನೆಯ ಚತುರ್ಮಾಸ ಬಿ.ಎ./ಬಿ.ಎಸ್.ಡಬ್ಲ್ಯೂ. ಪದವಿ ಪರೀಕ್ಷೆ,**
**ನವೆಂಬರ್/ಡಿಸೆಂಬರ್ 2015**
**(2013-14 ಬ್ಯಾಚ್ ಮತ್ತು ಆನಂತರದವರಿಗೆ)**

**ಕನ್ನಡ**

**ಕನ್ನಡ ಭಾಷಾ ಪತ್ರಿಕೆ – 1**

ಸಮಯ : 3 ಗಂಟೆಗಳು — ಗರಿಷ್ಠಾಂಕಗಳು : 80

**ಭಾಗ – 1 : ಕಾವ್ಯ**

I. ಅ) ಒಂದು ಪ್ರಶ್ನೆಗೆ ಉತ್ತರಿಸಿರಿ : **(1×8=8)**

1) ಧರ್ಮಾರ್ಜುನರ ಕಲಹಕ್ಕೆ ಕಾರಣವೇನು ? ಕೃಷ್ಣನು ನಿವಾರಿಸಿದ ಬಗೆ ಹೇಗೆ ? ವಿವರಿಸಿರಿ.

2) 'ನನ್ನ ಅವತಾರ' ಕವನದಲ್ಲಿ ಅಡಿಗರು ಮಾಡುವ ವಿಮರ್ಶೆ ಏನು ? ವಿವರಿಸಿರಿ.

ಆ) ಒಂದು ಪ್ರಶ್ನೆಗೆ ಸಂಕ್ಷಿಪ್ತವಾಗಿ ಉತ್ತರಿಸಿರಿ : **(1×5=5)**

1) ಅಗ್ನಿಪರ್ವ ಕವನದಲ್ಲಿ ಜಿ.ಎಸ್. ಶಿವರುದ್ರಪ್ಪನವರ ಚಿಂತನೆ ಏನು ? ವಿಮರ್ಶಿಸಿರಿ.

2) ಕನ್ನಡನಾಡಿನ ವರ್ತಮಾನದ ಸ್ಥಿತಿಗತಿಗಳ ಬಗ್ಗೆ ಅಲ್ಲಮಪ್ರಭು ಪ್ರತಿಕ್ರಿಯಿಸಿದ ರೀತಿ ಏನು ? ವಿಮರ್ಶಿಸಿರಿ.

ಇ) ಎರಡಕ್ಕೆ ಟಿಪ್ಪಣಿ ಬರೆಯಿರಿ : **(2×3=6)**

1) ಖಾಂಡವ ವನ

2) ಕೆ.ಎಸ್. ನಿಸಾರ್ ಅಹಮದ್

3) ಕುಮಾರವ್ಯಾಸ.

II. ಅ) ಒಂದು ಪದ್ಯ ಭಾಗದ ಸಂದರ್ಭ ಸೂಚಿಸಿ ಮಹತ್ವವನ್ನು ವಿವೇಚಿಸಿರಿ : **(1×5=5)**

1) ಲೇಸುಲೇಸಿದು ತಪ್ಪನಾಡಿದ
ಭಾಷೆ ಬಾಹಿರವಾಗ ಬೇಡ ವಿ
ನಾಶ ಕಾಸಂಜೆನು ಮುರಾಂತಕನಿದು ಧನಂಜಯನ
ಆಸೆಯೆನಗೀ ರಾಜ್ಯದ ಮೋ
ಹೀ ಶರೀರದಲ್ಲಿಲ್ಲ ಪಾರ್ಥನ
ಭಾಷೆ ನಿಂದರೆ ಸಾಕು ನೀ ಸಾರೆಂದ ನಾ ಭೂಪ.

**P.T.O.**

2) ನತ್ತು ಕೊಟ್ಟಳು ಹರಿಗೆ, ಅತ್ತು ಬಿಟ್ಟಳು ಮರೆಗೆ
ಪತಿಯು ಸಿತ್ತಳು ಕೊಡುಗೆ ದೇವನೆಡೆಗೆ
ಹೆಣ್ಣು ಮಾಯೆಯ ನೆರಳೇ? ಹೆಣ್ಣು ಗಂಡಿನ ಮರುಳೇ?
ಹೇಳಲದ ಉಂಟೇನು ಹಾಗಿವಳಿಗೆ?

ಆ) ಎರಡು ಸಾಲುಗಳಿಗೆ ಸಂದರ್ಭ ಸೂಚಿಸಿ ಸ್ವಾರಸ್ಯವನ್ನು ವಿಶದಪಡಿಸಿರಿ: **(2×3=6)**

1) ಲೋಗರ ಹಳಿವುದೇ ಪಥೆ ಶಸ್ತ್ರಪಥೆ ಪಥೆಯಲ್ಲ.
2) ಇನ್ನೂ ಏನಾಗಬೇಕಾಗಿದೆ ಈ ಮನುಕುಲಕ್ಕೆ?
3) ನಾಡ ಸರಹದ್ದಲ್ಲಿ ಬಂದು ಉಳಿದವು ಈಗ.

III. ಒಂದೊಂದು ಪದ/ವಾಕ್ಯದಲ್ಲಿ ಉತ್ತರಿಸಿರಿ: **(5×1=5)**

1) ಕನ್ನಡದ ಮೂರನೇ ರಾಷ್ಟ್ರಕವಿ ಯಾರು?
2) ಕಿರೀಟಿ ಎಂದರೆ ಯಾರು?
3) ಪುರಂದರ ದಾಸರ ಮೂಲ ಹೆಸರೇನು?
4) ಚಂಡೆ–ಮದ್ದಳೆ ಕವನ ಸಂಕಲನದ ಲೇಖಕ ಯಾರು?
5) ಕುಮಾರವ್ಯಾಸ ಭಾರತ ಯಾವ ಛಂದಸ್ಸಿನಲ್ಲಿದೆ?

## ಭಾಗ – 2 : ಗದ್ಯ

IV. ಅ) ಒಂದು ಪ್ರಶ್ನೆಗೆ ಉತ್ತರಿಸಿರಿ: **(1×8=8)**

1) 'ಕಮಲಾಪುರದ ಹೋಟ್ಲಿನಲ್ಲಿ' ಕಥೆಯ ಸ್ವಾರಸ್ಯವನ್ನು ವಿವರಿಸಿರಿ.
2) ತಾಳ್ತಜೆ ವಸಂತ ಕುಮಾರರ ಸಂಸ್ಕೃತಿ ಚಿಂತನ ಲೇಖನದ ಸ್ವಾರಸ್ಯವನ್ನು ವಿವರಿಸಿರಿ.

ಆ) ಒಂದು ಪ್ರಶ್ನೆಗೆ ಉತ್ತರಿಸಿರಿ: **(1×8=8)**

1) 'ರಾಮನು ಸಂತೆಗೆ ಹೋದದ್ದು' – ಕತೆಯಲ್ಲಿ ರಾಮನ ಪಾತ್ರವನ್ನು ಚಿತ್ರಿಸಿರಿ.
2) ತಿರುಕಣ್ಣನ ಮತದಾನ–ಕತೆ ಈಗಿನ ಮತದಾನಕ್ಕೆ ಹಿಡಿದ ಕನ್ನಡಿ ಹೇಗೆ? ವಿವರಿಸಿರಿ.

ಇ) ಒಂದು ಪ್ರಶ್ನೆಗೆ ಉತ್ತರಿಸಿರಿ: **(1×5=5)**

1) ನಿಕ್–ಜನಿಕ್‌ನ ಬದುಕು ನೀಡುವ ಸಂದೇಶವೇನು? ವಿಚಾರ ಮಾಡಿರಿ.
2) ಕರ್ನಾಟಕದ ಸಂವರ್ಧನೆಯಲ್ಲಿ ಮಹಿಳೆಯರ ಪಾತ್ರವೇನು ? ಕಮಲಾ ಹಂಪನರವರ ಲೇಖನದ ಹಿನ್ನೆಲೆಯಲ್ಲಿ ವಿಚಾರ ಮಾಡಿರಿ.

V. ಒಂದಕ್ಕೆ ಸುಮಾರು ಒಂದು ಪುಟದಷ್ಟು ಟಿಪ್ಪಣಿ ಬರೆಯಿರಿ : (1×5=5)

1) ಯುವಜನತೆ ಮತ್ತು ಸಂಸ್ಕೃತಿ

2) ಮತದಾನದ ಮಹತ್ವ

3) ದಾಂಪತ್ಯದ ವಿರಸ–ಮಕ್ಕಳ ಮೇಲಿನ ಪರಿಣಾಮ.

VI. ಒಂದೊಂದು ಪದ/ವಾಕ್ಯದಲ್ಲಿ ಉತ್ತರಿಸಿರಿ : (4×1=4)

1) ಹುತ್ತರಿ ಹಾಡು–ಕವನದ ಕವಿ ಯಾರು ?

2) ರಂಗಮ್ಮನ ವಠಾರ ಕಾದಂಬರಿಯ ಕರ್ತೃ ಯಾರು ?

3) 'ಅಮ್ಮ ಹೇಳಿದ ನೂರೆಂಟು ಸುಳ್ಳುಗಳು' ಕೃತಿಯ ಲೇಖಕರು ಯಾರು ?

4) ಬೌದ್ಧಾಯನ ಕೃತಿಯ ಲೇಖಕರು ಯಾರು ?

## ಭಾಗ–3 : ಕ್ರಿಯಾತ್ಮಕ ಕನ್ನಡ

VII. ಒಂದು ಪ್ರಶ್ನೆಗೆ ಉತ್ತರಿಸಿರಿ : (1×8=8)

1) ಗಾದೆಗಳ ಲಕ್ಷಣಗಳೇನು ? ವಿವರಿಸಿರಿ.

2) ಅರೆ ಸರಕಾರಿ ಪತ್ರವೆಂದರೇನು ? ಅದರ ಮುಖ್ಯ ಲಕ್ಷಣಗಳೇನು ?

VIII. ಒಂದು ಪ್ರಶ್ನೆಗೆ ಉತ್ತರಿಸಿರಿ : (1×5=5)

1) ದೇಶ ಸುತ್ತು ಕೋಶ ಓದು – ಗಾದೆಯನ್ನು ವಿಸ್ತರಿಸಿ ಬರೆಯಿರಿ.

2) ಸುತ್ತೋಲೆಯ ಸ್ವರೂಪವೇನು ? ವಿಶದಪಡಿಸಿರಿ.

IX. ಒಂದೊಂದು ಪದ/ವಾಕ್ಯದಲ್ಲಿ ಉತ್ತರಿಸಿರಿ : (2×1=2)

1) Circular ಪದಕ್ಕೆ ಸಂವಾದಿಯಾದ ಕನ್ನಡ ಪದ ಯಾವುದು ?

2) ಮನೆಗೆ__________ ಊರಿಗೆ__________.

---